KARN320011892014

Presented on : 03-07-2014
Registered on : 03-07-2014
Decided on : 15-04-2026
Duration : 11 years, 9 months, 12 days

# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕನಕಪುರ.

ಉಪಸ್ಥಿತರು : ಶ್ರೀಮತಿ ರಾಧಾ ಎಸ್.
ಬಿ.ಎ. ಎಲ್.ಎಲ್.ಎಂ.
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

**<u>ದಿನಾಂಕ 15ನೇ ಏಪ್ರಿಲ್, 2026.</u>**

**<u>C.C./615/2014</u>**

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ
ಹಾರೋಹಳ್ಳಿ ಪೊಲೀಸ್ ಠಾಣೆ.

**(ಸಹಾಯಕ ಸರ್ಕಾರಿ ಅಭಿಯೋಜಕರು)**

ವಿರುದ್ಧ

ಆರೋಪಿತರುಃ 1. ಜಗದೀಶ
ಬಿನ್ ಕಬ್ಬಾಳೇಗೌಡ,
ವಯಸ್ಸು 30 ವರ್ಷಗಳು,

2. ರಾಮಕೃಷ್ಣ
ಬಿನ್ ಕಬ್ಬಾಳೇಗೌಡ,
ವಯಸ್ಸು 27 ವರ್ಷಗಳು,

3. ನಾರಾಯಣ
ಬಿನ್ ಲೇಟ್ ಸಿಂಗ್ರಿಗೌಡ,
ವಯಸ್ಸು 43 ವರ್ಷಗಳು,

ಎಲ್ಲರ ವಾಸಃ
ಉಯಲಪ್ಪನಹಳ್ಳಿ ಗ್ರಾಮ,
ದೊಡ್ಡಮರಳವಾಡಿ ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ.ಸಿ.ಎಂ.ಜೆ, ವಕೀಲರು)**

| | | |
|---|---|---|
| ಘಟನೆ ನಡೆದ ದಿನಾಂಕ | : | 04.06.2013 |
| ಆರೋಪಿತರು ನ್ಯಾಯಾಲಯಕ್ಕೆ ಹಾಜರಾದ ದಿನಾಂಕ | : | 23.09.2014 |
| ಆರೋಪಿತರನ್ನು ಬಿಡುಗಡೆ ಮಾಡಿದ ದಿನಾಂಕ | : | 23.09.2014 |
| ಸಾಕ್ಷಿದಾರರ ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 06.07.2024 |
| ಸಾಕ್ಯ ಮುಗಿದ ದಿನಾಂಕ | : | 18.02.2026 |
| ಪ್ರಕರಣದ ಆರೋಪಗಳು | : | ಭಾರತೀಯ ದಂಡ ಸಂಹಿತೆಯ ಕಲಂ.323, 324, 504 ಮತ್ತು 506 ಸಹವಾಚಕ ಕಲಂ.34 |
| ನ್ಯಾಯಾಧೀಶರ ಅಭಿಪ್ರಾಯ | : | ಅಂತಿಮ ಆದೇಶದಂತೆ |
| ಸರ್ಕಾರದ ಪರ | : | ಸಹಾಯಕ ಸರ್ಕಾರಿ ಅಭಿಯೋಜಕರು |
| ಆರೋಪಿತರ ಪರ ವಕೀಲರು | : | ಶ್ರೀ.ಸಿ.ಎಂ.ಜೆ, ವಕೀಲರು |

(ಶ್ರೀಮತಿ. ರಾಧ. ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

**ತೀರ್ಪು**

ಹಾರೋಹಳ್ಳಿ ಪೋಲೀಸರು ಆರೋಪಿತರ ವಿರುದ್ಧ ತನಿಖೆಯನ್ನು ಪೂರೈಸಿ ಭಾರತೀಯ ದಂಡ ಸಂಹಿತೆಯ ಕಲಂ.323, 324, 504 ಮತ್ತು 506 ಸಹವಾಚಕ ಕಲಂ.34 ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಹೇಳಿ ದೋಷಾರೋಪಣೆ ಪತ್ರವನ್ನು ಈ ನ್ಯಾಯಾಲಯದಲ್ಲಿ ಹಾಕಿರುತ್ತಾರೆ.

**2. ಅಭಿಯೋಗ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ.**

ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ಉಯಲಪ್ಪನಹಳ್ಳಿ ಗ್ರಾಮದ ವಾಸಿಯಾದ ಚಾಸಾ-1/ಚಲುವೇಗೌಡ ರವರು ದಿನಾಂಕಃ 04.06.2013 ರಂದು ಸಂಜೆ ಸುಮಾರು 5.30 ಗಂಟೆ ಸಮಯದಲ್ಲಿ ಹಾಲಿನ ಕ್ಯಾನನ್ನು ತೊಳೆಯುತ್ತಿರುತ್ತಾರೆ. ಆಗ ಚಾಸಾ-1 ರವರ ದೊಡ್ಡಮ್ಮನಾದ ಪಾರ್ವತಮ್ಮ ರವರು 1ನೇ ಆರೋಪಿ ರವರ ಬಾಬ್ತು ನಲ್ಲಿಯ ಬಳಿ ನಡೆದುಕೊಂಡು ಬರುತ್ತಿದ್ದ ವಿಚಾರವಾಗಿ, ಆರೋಪಿಗಳು ಹಾಗೂ ಚನ್ನಮ್ಮ ರವರು ಏಕಾಏಕಿ ಚಾಸಾ-1 ರವರ ತಂದೆಯಾದ ಚಾಸಾ-2/ಮರಿಗೌಡ ಉರುಫ್ ಚಿಕ್ಕಚಲುವೇಗೌಡ ರವರ ಜೊತೆ ಗಲಾಟೆ ಮಾಡಿ, ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 1ನೇ ಆರೋಪಿಯು ಲಾರಿಯ ಜಾಕ್ ರಾಡಿನಿಂದ ಚಾಸಾ-2 ರವರ ಎಡಕೈಗೆ ಮತ್ತು ಎಡಕಿಬ್ಬರಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾರೆ. ಉಳಿದ ಆರೋಪಿಗಳು ಕೈಗಳಿಂದ ಚಾಸಾ-2 ರವರಿಗೆ ಹೊಡೆದು ನೋವುಂಟು ಮಾಡಿರುತ್ತಾರೆ. ಅಷ್ಟರಲ್ಲಿ ಚಾಸಾ-1, ಚಾಸಾ-4/ರಾಜಣ್ಣ ಮತ್ತು ಚಾಸಾ-5/ನಾಗರಾಜು ರವರು ಹಾಗೂ ಇತರರು ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರೋಪಿತರು ಚಾಸಾ-1 ಮತ್ತು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಇನ್ನೊಂದು ಬಾರಿ ನಲ್ಲಿ ಹತ್ತಿರ ಬಂದರೆ ಲಾರಿ ಹತ್ತಿಸಿ ಸಾಯಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ-1 ರವರು ಚಾಸಾ-2 ರವರನ್ನು ಹಾರೋಹಳ್ಳಿ

ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ. ಈ ವಿಚಾರವಾಗಿ ಆರೋಪಿತರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿ ಸದರಿ ಚಾಸಾ.1/ಚಲುವೇಗೌಡ ರವರು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಹಾರೋಹಳ್ಳಿ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ.467/2013 ರ ಅಡಿಯಲ್ಲಿ ಗುನ್ನೆ ದಾಖಲೆ ಮಾಡಿಕೊಂಡು ತನಿಖೆ ಮಾಡಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಪೋಲೀಸರು ಸಲ್ಲಿಸಿರುತ್ತಾರೆ.

**3.** ಆರೋಪಿತರು ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನಿನ ಮೇಲೆ ಇರುತ್ತಾರೆ. ಆರೋಪಿತರಿಗೆ ಅಭಿಯೋಗದ ಎಲ್ಲಾ ಕಾಗದ ಪತ್ರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರ ಅಡಿಯಲ್ಲಿ ಕೊಟ್ಟಿದ್ದು ಇರುತ್ತದೆ. ವಾದ ವಿವಾದಗಳನ್ನು ಕೇಳಿದೆನು, ದೋಷಾರೋಪಣೆ ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ತಾವು ಯಾವುದೇ ತಪ್ಪು ಮಾಡಿಲ್ಲ, ವಿಚಾರಣೆ ಮಾಡಲು ಕೋರಿರುತ್ತಾರೆ. ಕಾರಣ ಅಭಿಯೋಗ ಪಕ್ಷವು ಐದು ಜನ ಸಾಕ್ಷಿದಾರರನ್ನು ಪ್ರಾಸಾ.1 ರಿಂದ ಪ್ರಾಸಾ.5 ಎಂದು ವಿಚಾರಣೆ ಮಾಡಿಕೊಂಡಿದ್ದು ಇರುತ್ತದೆ. ನಾಲ್ಕು ದಸ್ತಾವೇಜುಗಳನ್ನು ನಿ.ಪಿ.1 ರಿಂದ ನಿಪಿ.4 ಎಂದು ಹಾಗೂ ಮುದ್ದೆಮಾಲು-1 ನ್ನು ಗುರುತಿಸಿಕೊಂಡಿರುತ್ತಾರೆ.

**4.** ಚಾಸಾ-1 ರವರು ಪಿರ್ಯಾದುದಾರರು/ಪ್ರತ್ಯಕ್ಷ, ಕೃತ್ಯಸ್ಥಳ ಮತ್ತು ಅಮಾನತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ಚಾಸಾ-2 ರವರು ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಚಾಸಾ-3 ಮತ್ತು ಚಾಸಾ-5 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಚಾಸಾ-4 ರವರು ಪ್ರತ್ಯಕ್ಷ ಮತ್ತು ಕೃತ್ಯಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ಚಾಸಾ-6 ರವರು ಕೃತ್ಯಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ಚಾಸಾ-7 ರವರು ವೈದ್ಯಾಧಿಕಾರಿಯಾಗಿದ್ದು, ಚಾಸಾ-8 ರಿಂದ ಚಾಸಾ-10 ರವರು ತನಿಖಾಧಿಕಾರಿಗಳಾಗಿರುತ್ತಾರೆ. ಸದರಿ ಸಾಕ್ಷಿದಾರರ ಪೈಕಿ, ಪ್ರಾಸಾ-2 ಮತ್ತು ಪ್ರಾಸಾ-3

ರವರು ಅಭಿಯೋಜನೆಗೆ ಭಾಗಶಃ ಸಾಕ್ಷ್ಯ ನುಡಿದಿದ್ದು, ಪ್ರಾಸಾ-1, ಪ್ರಾಸಾ-4 ಮತ್ತು ಪ್ರಾಸಾ-5 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿತರು ಅಭಿಯೋಗದ ಪರ ವಿಚಾರಣೆಗೊಳಗೊಂಡ ಎಲ್ಲಾ ಸಾಕ್ಷ್ಯವನ್ನು ನಿರಾಕರಿಸಿದ್ದು ಇರುತ್ತದೆ. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಮಾಡುವುದರ ಮೂಲಕ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**5.** ನಾನು ಸಹಾಯಕ ಸರ್ಕಾರಿ ಅಭಿಯೋಗದ ಪರ ಹಾಗೂ ಆರೋಪಿತರ ಪರ ವಕೀಲರ ವಾದ ವಿವಾದಗಳನ್ನು ಕೇಳಿದೆನು.

**6.** ನಾನು ನಿರ್ಣಯಿಸುವಂತಹ ಅಂಶಗಳು ಈ ಕೆಳಗಿನಂತೆ ಇರುತ್ತದೆ.

**ಅಂಶ-1:** ಅಭಿಯೋಗ ಪಕ್ಷವು ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.323, 324, 504 ಮತ್ತು 506 ಸಹವಾಚಕ ಕಲಂ.34 ರ ಅಡಿಯಲ್ಲಿ ಗುನ್ಹೆ ಮಾಡಿರುತ್ತಾರೆಂದು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆಯೇ ?

**ಅಂಶ-2 :** ಆದೇಶ ಏನು ?

**7.** ಈ ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ ನಂ.1 : ನಕಾರಾತ್ಮಕವಾಗಿ
ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

**ಕಾರಣಗಳು**

**8. ಅಂಶ ನಂ.1:** ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದು ಈ ಮೇಲೆ ಈಗಾಗಲೇ ತಿಳಿಸಲಾಗಿರುತ್ತದೆ. ಅಭಿಯೋಜನೆಯು ಆರೋಪಿತರ ವಿರುದ್ಧದ ಅಪರಾಧಗಳನ್ನು ಸಾಬೀತುಪಡಿಸಲು ಐದು ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-5 ಎಂದು ವಿಚಾರಣೆಗೆ ಒಳಪಡಿಸುವ ಮೂಲಕ ನಿ.ಪಿ-1 ರಿಂದ ನಿಪಿ-4 ದಾಖಲೆಗಳನ್ನು ನಿಶಾನೆಯಾಗಿ ಹಾಗೂ ಮುದ್ದೆಮಾಲು-1ನ್ನು ಗುರುತಿಸಿಕೊಂಡಿರುತ್ತಾರೆ.

**9.** ಚಾಸಾ-3, ಚಾಸಾ-5 ಮತ್ತು ಚಾಸಾ-7 ರಿಂದ ಚಾಸಾ-9 ರವರನ್ನು ಹಾಜರು ಪಡಿಸಿ ಸಾಕ್ಷ್ಯ ನುಡಿಸಲು ಅಭಿಯೋಜನೆಗೆ ಸಾಕಷ್ಟು ಕಾಲಾವಕಾಶ ಕಲ್ಪಿಸಿದ್ದಾಗ್ಯೂ ಅವರನ್ನು ಹಾಜರು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದ್ದರಿಂದ ದಿನಾಂಕಃ 16.07.2025 ರ ಆದೇಶದ ಅನ್ವಯ ಚಾಸಾ-3 ಮತ್ತು ಚಾಸಾ-5 ರವರನ್ನು ಹಾಗೂ ದಿನಾಂಕಃ 18.02.2026 ರ ಆದೇಶದ ಅನ್ವಯ ಚಾಸಾ-7 ರಿಂದ ಚಾಸಾ-9 ರವರನ್ನು ಸಾಕ್ಷ್ಯ ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ.

**10.** ಪ್ರಾಸಾ-1/ಚಲುವೇಗೌಡ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ತಮ್ಮ ಮತ್ತು ಆರೋಪಿತರ ಮನೆ ಅಕ್ಕಪಕ್ಕ ಇರುತ್ತವೆ. ದಿನಾಂಕ.04.06.2013 ರಂದು ಸಂಜೆ 5.30 ಗಂಟೆ ಸಮಯದಲ್ಲಿ 1ನೇ ಆರೋಪಿ/ಜಗದೀಶ್ ಈತನು ತಮ್ಮ ತಂದೆ ಚಾಸಾ-2 ರವರಿಗೆ ನಲ್ಲಿಯನ್ನು ಏಕೆ ಕಿತ್ತುಹಾಕಿರುತ್ತೀಯಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದು, ಆಗ ಚಾಸಾ-3 ಮತ್ತು ಚಾಸಾ-4 ರವರು ಜಗಳವನ್ನು ಬಗೆಹರಿಸಿ ಕಳುಹಿಸಿದ್ದು, ನಂತರ 2ನೇ ಆರೋಪಿ/ರಾಮಕೃಷ್ಣ ಫೋನ್ ಮೂಲಕ ಇತರೆ ಆರೋಪಿತರನ್ನು ಕರೆಸಿಕೊಂಡು ಇವರನ್ನು ಮುಗಿಸಿಬಿಡೋಣ ಎಂದು ಹೇಳಿ ಅಂದಾಜು 6.00 ಗಂಟೆ ಸಮಯದಲ್ಲಿ ಜಗದೀಶ್ ಇವರು ತನ್ನ ತಂದೆ ಚಾಸಾ-2 ರವರಿಗೆ

ರಾಡಿನಿಂದ ಹೊಡೆದು ಎಡಪಕ್ಕೆಗೆ ಮತ್ತು ಎಡಗೈ ಏಟು ಬಿದ್ದಿರುತ್ತದೆ. ಆಗ ತನ್ನ ತಂದೆ ಜ್ಞಾನತಪ್ಪಿ ಬಿದ್ದಿದ್ದು, ಚಾಸಾ-4 ಮತ್ತು ಚಾಸಾ-6 ರವರು ತನ್ನ ತಂದೆಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಸದರಿ ಘಟನೆಯ ಸಮಯದಲ್ಲಿ ತಾನು ಹಾಲಿನ ಕ್ಯಾನ್‌ಗಳನ್ನು ತೊಳೆಯುತ್ತಿದ್ದೆ ಘಟನೆಯಾದ ನಂತರ ಆರೋಪಿತರು ನಿಮ್ಮ ತಂದೆಗೆ ಚಿಕಿತ್ಸೆಗೆ ಹಣವನ್ನು ಕೊಡುತ್ತೇವೆ ರಾಜೀ ಮಾಡಿಕೊಳ್ಳೋಣ ಎಂದು ಹೇಳಿದ್ದರಿಂದ ತಾನು ದೂರನ್ನು ನೀಡಿರುವುದಿಲ್ಲ. ಅನೇಕ ದಿನಗಳು ಕಳೆದ ನಂತರ ಆರೋಪಿತರು ನೀವು ಏನು ಮಾಡಿಕೊಳ್ಳುತ್ತೀರಿ ಮಾಡಿಕೊಳ್ಳಿ ಎಂದು ಹೇಳಿದಾಗ ದಿ.23.11.2013 ರಂದು ಪೊಲೀಸ್ ಠಾಣೆಗೆ ಲಿಖಿತ ದೂರನ್ನು ನೀಡಿರುತ್ತೇನೆ. ಪೋಲೀಸರು ದಿನಾಂಕ.24.11.2013 ರಂದು ಬೆಳಿಗ್ಗೆ 10.30 ರಿಂದ 11.00 ಗಂಟೆ ಸಮಯದಲ್ಲಿ ಘಟನಾ ಸ್ಥಳಕ್ಕೆ ಬಂದು ಮಹಜರ್ ಮಾಡಿ ಒಂದು ರಾಡನ್ನು ಚಾಸಾ-4 ಮತ್ತು ಚಾಸಾ-6 ರವರಿಂದ ಪಡೆದು ಅಮಾನತ್ತು ಪಡಿಸಿಕೊಂಡು ಹೋಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**11.** ಪ್ರಾಸಾ-2/ಮರಿಗೌಡ ಉರುಫ್ ಚಿಕ್ಕಚಲುವೇಗೌಡ ಇವರು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ತಮ್ಮ ಮತ್ತು ಆರೋಪಿತರ ಮನೆ ಅಕ್ಕಪಕ್ಕ ಇರುತ್ತವೆ. ಅಂದಾಜು 5-6 ವರ್ಷಗಳ ಹಿಂದೆ ಸಂಜೆ 5.00 ರಿಂದ 5.30 ಗಂಟೆ ಸಮಯದಲ್ಲಿ ತಮ್ಮ ಮನೆಯ ಮುಂದೆ ಮಾತನಾಡುತ್ತ ನಿಂತಿರುವಾಗ 1ನೇ ಆರೋಪಿ/ಜಗದೀಶ್ ಹಿಂದಿನಿಂದ ಬಂದು ಕಬ್ಬಿಣದ ರಾಡಿನಿಂದ ತನ್ನ ಎಡಗೈ ಮತ್ತು ಎಡಪಕ್ಕೆಗೆ ಹೊಡೆದಿರುತ್ತಾನೆ. ಆಗ ತನಗೆ ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಪ್ರಜ್ಞೆ ಬಂದಿದ್ದು, ಪೊಲೀಸರು ಘಟನೆ ಕುರಿತು ವಿಚಾರಣೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಪ್ರಾಸಾ-3/ರಾಜಣ್ಣ ಇವರು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ನಿಪಿ-2ಕ್ಕೆ ದಿನಾಂಕ:22.11.2013 ರಂದು ತಾನು 1ನೇ ಆರೋಪಿಯ ಮನೆಯ ಬಳಿ ಪೊಲೀಸರು ಮಹಜರ್ ಗಾಗಿ ಬಂದಾಗ ತನ್ನ ಸಹಿ ಪಡೆದಿರುತ್ತಾರೆ. ಪೊಲೀಸರು ಗಲಾಟೆಯ ವಿಚಾರಕ್ಕೆ ಸಂಬಂಧಿಸಿದಂತೆ ತನ್ನನ್ನು ಸ್ಥಳದಲ್ಲಿ ವಿಚಾರಿಸಿರುತ್ತಾರೆ. ಆ ಸಮಯದಲ್ಲಿ ಗಲಾಟೆಯ ವಿಚಾರಕ್ಕೆ ಸಂಬಂಧಿಸಿದಂತೆ ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. 1ನೇ ಆರೋಪಿ ಮತ್ತು ಚಾಸಾ-2 ರವರು ಗಲಾಟೆ ಮಾಡಿಕೊಳ್ಳುತ್ತಿದ್ದರು. ಆಗ 1ನೇ ಆರೋಪಿಯು ಅಲ್ಲಿಗೆ ಬಂದು ಜಾಕ್ ರಾಡ್ ತೆಗೆದುಕೊಂಡು ಚಾಸಾ-2 ರವರ ಎಡಗೈ ತೋಳಿಗೆ ಹೊಡೆದರು. ಜಗದೀಶ, ರಾಘು ಮತ್ತು ತಾನು ಜಗಳ ಬಿಡಿಸಿ ಸಮಾಧಾನ ಮಾಡಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಪ್ರಾಸಾ-4/ವೆಂಕಟೇಶ್ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ನಿಪಿ-2ಕ್ಕೆ ದಿನಾಂಕ.24.11.2013 ರಂದು ಪೊಲೀಸರು ಮಹಜರ್ ಗಾಗಿ ಬಂದಾಗ ತನ್ನ ಸಹಿಯನ್ನು ಪಡೆದಿರುತ್ತಾರೆ. ಆ ದಿನ ಸ್ಥಳದಲ್ಲಿ ಹಾಜರಿದ್ದ ಚಾಸಾ-1 ರವರು ಪೊಲೀಸರಿಗೆ ಘಟನೆಯ ಬಗ್ಗೆ ಹೇಳಿದರು, ಅದರಂತೆ ತನ್ನ ಸಹಿ ಪಡೆದರು. ಆ ದಿನ ತನ್ನೊಂದಿಗೆ ಚಾಸಾ-3 ಮತ್ತು ಚಾಸಾ-4 ರವರು ಸ್ಥಳದಲ್ಲಿ ಹಾಜರಿದ್ದರು. ಆ ದಿನ ಮಹಜರನ್ನು ಬೆಳಿಗ್ಗೆ 10.30 ರಿಂದ 11.00 ಗಂಟೆಯ ವರೆಗೂ ತಯಾರಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14.** ಪ್ರಾಸಾ-5/ಎ.ಪಿ.ಕುಮಾರ್, ಪಿ.ಎಸ್.ಐ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ.23.11.2013 ರಂದು ತಾನು ಈ ಪ್ರಕರಣದ ಕಡತವನ್ನು ಚಾಸಾ-8 ರವರಿಂದ ಪಡೆದುಕೊಂಡು ಮುಂದುವರೆದ ತನಿಖೆಯನ್ನು ಕೈಗೊಂಡಿರುತ್ತೇನೆ. ದಿನಾಂಕ.23.11.2013 ರಂದು ಚಾಸಾ-2 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ

ಪತ್ರವನ್ನು ಚಾಸಾ-7 ರವರಿಂದ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ದಿನಾಂಕ.24.11.2013 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-4 ಮತ್ತು ಚಾಸಾ-6 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.00 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿ ಅದಕ್ಕೆ ಸಂಬಂಧಿಸಿದಂತೆ ಮಹಜರ್ ತಯಾರಿಸಿರುತ್ತೇನೆ. ಸ್ಥಳ ಪಂಚನಾಮೆ ಕಾಲದಲ್ಲಿ ಆರೋಪಿತರು ಚಾಸಾ-2 ರವರಿಗೆ ಹೊಡೆಯಲು ಬಳಸಿದ ಮೂರು ಮುಕ್ಕಾಲು ಅಡಿ ಇರುವ ಒಂದು ಕಬ್ಬಿಣದ ರಾಡನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಕಬ್ಬಿಣದ ರಾಡನ್ನು ತಮ್ಮ ಠಾಣಾ ಮಾಲುಪಟ್ಟಿಯಲ್ಲಿ ಸೇರಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ದಿನಾಂಕ.24.11.2013 ರಂದು ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ-3 ರಿಂದ ಚಾಸಾ-5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ.02.12.2013 ರಂದು ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ-9 ರವರಿಗೆ ವಹಿಸಿಕೊಟ್ಟಿರುತ್ತೇನೆ. ಅದೇ ದಿನ ಆರೋಪಿತರು ಚಾಸಾ-9 ರವರ ಮುಖೇನ ಠಾಣೆಗೆ ಹಾಜರಾದ ಮೇರೆಗೆ ಅವರನ್ನು ವಿಚಾರಿಸಿ ದಸ್ತಗಿರಿ ಕ್ರಮ ಕೈಗೊಂಡು ಚಾಸಾ-9 ರವರೇ ಅವರನ್ನು ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತಾರೆ. ದಿನಾಂಕ: 06.12.2013 ರಂದು ಚಾಸಾ-9 ರವರಿಂದ ಈ ಪ್ರಕರಣದ ಕಡತವನ್ನು ಪುನಃ ಪಡೆದುಕೊಂಡು ದಾಖಲೆಗಳನ್ನು ಪರಿಶೀಲಿಸಿ ಆರೋಪಿಗಳ ವಿರುದ್ದ ಅಪರಾದ ಸಾಬೀತಾದ ಕಾರಣಕ್ಕೆ ಅವರ ವಿರುದ್ದ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯಾದ ಚನ್ನಮ್ಮ ರವರ ವಿರುದ್ದ ಯಾವುದೇ ಆಪರಾಧ ಸಾಬೀತಾಗದೆ ಇರುವ ಕಾರಣಕ್ಕೆ ಅವರ ವಿರುದ್ದ ಪ್ರಕರಣವನ್ನು ಕೈಬಿಟ್ಟಿರುತ್ತೇನೆ. ದಿನಾಂಕ:23.11.2013 ರಂದು ಸಂಜೆ 6.30 ಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ

ದೂರನ್ನು ಚಾಸಾ-8 ರವರು ಸ್ವೀಕರಿಸಿ ಅದರ ಆಧಾರದ ಮೇಲೆ ಅವರು ತಮ್ಮ ಠಾಣಾ ಗುನ್ನ ನಂ.467/2013ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ ಪ್ರಾಸಾ-5 ರವರ ಸಾಕ್ಷ್ಯ ವಿಚಾರಣೆಯ ಮತ್ತು ಪಾಟೀಸವಾಲಿನಿಂದ ಘಟನೆಗೆ ಸಂಬಂಧಿಸಿದಂತೆ ಅವರ ಮೌಖಿಕ ಸಾಕ್ಷ್ಯವು ಒಂದಕ್ಕೊಂದು ಪೂರಕವಾಗಿರದೆ ವಿಭಿನ್ನವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಇಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರಾಸಾ-1 ರವರು ಘಟನೆಯ ಸಮಯದಲ್ಲಿ ತಾನು ಸ್ಥಳದಲ್ಲಿ ಹಾಜರು ಇರಲಿಲ್ಲ, ತಾನು ಆಗ ಹಾಲಿನ ಕ್ಯಾನುಗಳನ್ನು ತೊಳೆಯುತ್ತಿದ್ದ ಎಂಬ ಸಂಗತಿಯನ್ನು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಘಟನೆಗೆ ಸಂಬಂಧಿಸಿದಂತೆ ಪ್ರಾಸಾ-1 ರವರ ಸಾಕ್ಷ್ಯವನ್ನು ಈ ಪ್ರಕರಣದಲ್ಲಿ ಪರಿಗಣಿಸಲು ಸಾಧ್ಯವಿರುವುದಿಲ್ಲ. ಸಾಮಾನ್ಯವಾಗಿ ಗಾಯಾಳುಗಳು ತಮಗೆ ಆದಂತಹ ಹಲ್ಲೆಯ ಬಗ್ಗೆ, ಗಲಾಟೆಯ ಬಗ್ಗೆ ಮತ್ತು ತಮಗೆ ಯಾರು ಯಾರು ಯಾವುದರಿಂದ, ಎಲ್ಲೆಲ್ಲಿ ಹಲ್ಲೆ ಮಾಡಿದರು ಎಂಬ ಸಂಗತಿಯನ್ನು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ನುಡಿಯುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಗಾಯಾಳು ಸಾಕ್ಷಿದಾರರಾದ ಪ್ರಾಸಾ-2 ರವರು ಘಟನೆಗೆ ಸಂಬಂಧಿಸಿದಂತೆ ಸ್ವತಂತ್ರವಾಗಿ ಸಾಕ್ಷ್ಯ ನುಡಿಯದೇ, ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಘಟನೆಗೆ ಸಂಬಂಧಿಸಿದಂತೆ ಉತ್ತರ ಸೂಚಿಸುವ ಪ್ರಶ್ನೆಗಳನ್ನು ಕೇಳಿದಾಗ ಅವರು ಹೌದು ಸರಿ ಎಂದು ಉತ್ತರಿಸಿರುತ್ತಾರೆ. ಆದ್ದರಿಂದ ಪ್ರತಿಕೂಲ ಸಾಕ್ಷ್ಯ ವಿಚಾರಣೆಯ ಸಮಯದಲ್ಲಿ ಪ್ರಾಸಾ-2 ರವರು ಹೇಳಿದಂತಹ ಅಂಶಗಳನ್ನು ಈ ಪ್ರಕರಣದಲ್ಲಿ ಪರಿಗಣಸಿಸಲು ಸಾಧ್ಯವಿರುವುದಿಲ್ಲ.

**16.** ಇಲ್ಲಿ ಗಮನಿಸಬೇಕಾದ ಅತೀ ಮುಖ್ಯವಾದ ಮತ್ತೊಂದು ಅಂಶವೇಶನೆಂದರೆ ಪ್ರತ್ಯಕ್ಷ ಸಾಕ್ಷಿದಾರರೆಂದು ಹೇಳುವ ಪ್ರಾಸಾ-3 ರವರೂ ಸಹ ಘಟನೆಯ ಬಗ್ಗೆ ಸಂಪೂರ್ಣವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ-3 ರವರು ತಮ್ಮ ಪಾಟೀ ಸವಾಲಿನಲ್ಲಿ ಸಂಪಿನ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ-1 ಮತ್ತು ಆರೋಪಿತರ ಕುಟುಂಬಗಳ ನಡುವೆ ತಗಾದೆ ಇತ್ತು ಎಂಬ ಸಂಗತಿಯನ್ನು ಒಪ್ಪಿಕೊಂಡಿರುತ್ತಾರೆ. ಇಲ್ಲಿ ಅತೀ ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಅಂಶವೇನೆಂದರೆ ಘಟನೆ ನಡೆದಿದೆ ಎಂದು ಹೇಳುವುದು ದಿನಾಂಕಃ04.06.2013 ಎಂದು ಆದರೆ ನಿಪಿ-1 ರಂತೆ ಪ್ರಾಸಾ-1 ರವರು ದೂರನ್ನು ಕೊಟ್ಟಿರುವುದು ದಿನಾಂಕಃ 23.11.2013 ರಂದು ಆಗಿರುತ್ತದೆ. ಈ ರೀತಿ 5 ತಿಂಗಳುಗಳ ಕಾಲ ತಡವಾಗಿ ದೂರು ನೀಡಲು ಇರುವಂತಹ ಕಾರಣಗಳನ್ನು ನಿಪಿ-1 ರಲ್ಲಿ ನಮೂದಿಸಿರುವುದಿಲ್ಲ. **ನಿಪಿ-3 ರಲ್ಲಿ ನಮೂದಿಸಿದ ಗಾಯಗಳಿಗೂ ನಿಪಿ-1 ರಂತೆ ಗುರುತಿಸಲ್ಪಟ್ಟ ದೂರಿನಲ್ಲಿ ನಮೂದಿಸಿದ ಗಾಯಗಳಿಗೂ ವ್ಯತ್ಯಾಸ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.** ಪ್ರಾಸಾ-2 ರವರ ಪ್ರಕಾರ ಆ ದಿನ ತನಗೆ ಪ್ರಜ್ಞೆ ತಪ್ಪಿದ್ದರಿಂದ ಮುಂದೆ ಏನಾಯಿತು ಎಂಬ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಹೇಳಿರುತ್ತಾರೆ. ಆದರೆ ಈ ಸಂಗತಿಯನ್ನು ನಿಪಿ-1 ರಲ್ಲಾಗಲೀ ಅಥವಾ ನಿಪಿ-3 ರಲ್ಲಾಗಲೀ ನಮೂದಿಸಿರುವುದಿಲ್ಲ. ಮುದ್ದೆಮಾಲು-1 ಐದು ತಿಂಗಳುಗಳ ಕಾಲ ಅದೇ ಸ್ಥಳದಲ್ಲಿಯೇ ಬಿದ್ದಿತ್ತು ಎಂಬ ಸಂಗತಿಯನ್ನು ನಂಬಲು ಸಾಧ್ಯವಿರುವುದಿಲ್ಲ. ಪ್ರಾಸಾ-1 ಮತ್ತು ಪ್ರಾಸಾ-3 ರವರು ಪ್ರಾಸಾ-2 ರವರ ಸಂಬಂಧಿಕರಾಗಿರುವ ಕಾರಣಕ್ಕೆ ಮತ್ತು ಪ್ರಾಸಾ-5 ರವರು ಇಲಾಖಾ ಸಾಕ್ಷಿದಾರರಾಗಿರುವ ಕಾರಣಕ್ಕೆ ಅವರು ಅಭಿಯೋಜನೆಯ ಪರವಾಗಿ ಸಾಕ್ಷ್ಯ ನುಡಿಯುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಕೇವಲ ಇಲಾಖಾ ಸಾಕ್ಷಿದಾರರ ಸಾಕ್ಷ್ಯವನ್ನು ಈ ಪ್ರಕರಣದಲ್ಲಿ ಪರಿಗಣಿಸಲು ಸಾಧ್ಯವಿರುವುದಿಲ್ಲ.

**17.** ಇಲ್ಲಿ ಗಮನಿಸಬೇಕಾದ ಮುಖ್ಯವಾದ ಮತ್ತೊಂದು ಅಂಶವೇನೆಂದರೆ, ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-1 ಮತ್ತು ಪ್ರಾಸಾ-3 ರವರು ಪ್ರಾಸಾ-2 ರವರ ಸಂಬಂಧಿಕರಾಗಿದ್ದು, ಅವರು ಪ್ರಾಸಾ-2 ರವರ ಪರವಾಗಿ ಸಾಕ್ಷ್ಯ ನುಡಿಯುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಸಾಮಾನ್ಯವಾಗಿ ಹಲ್ಲೆಗೆ ಒಳಗಾದ ವ್ಯಕ್ತಿಗಳು ಮತ್ತು ಅದನ್ನು ಕಣ್ಣಾರೆ ಕಂಡ ವ್ಯಕ್ತಿಗಳು ಘಟನೆಗೆ ಸಂಬಂಧಿಸಿದಂತೆ ಸ್ವತಂತ್ರವಾಗಿ ಸಾಕ್ಷ್ಯ ನುಡಿಯುವುದು ಸಾಮಾನ್ಯವಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಪ್ರಾಸಾ-2 ಮತ್ತು ಪ್ರಾಸಾ-3 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಘಟನೆಗೆ ಸಂಬಂಧಿಸಿದಂತೆ ಉತ್ತರ ಸೂಚಿಸುವ ಪ್ರಶ್ನೆಗಳನ್ನು ಕೇಳಿದಾಗಲೇ ಅವರು ಹೌದು ಸರಿ ಎಂದು ಉತ್ತರಿಸಿರುತ್ತಾರೆ ಮತ್ತು ಪ್ರಾಸಾ-1 ರವರು ಘಟನೆಯ ಸಮಯದಲ್ಲಿ ತಾನು ಸ್ಥಳದಲ್ಲಿ ಇರಲಿಲ್ಲ ಎಂಬ ಸಂಗತಿಯನ್ನು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಪ್ರಾಸಾ-1 ರಿಂದ ಪ್ರಾಸಾ-3 ರವರು ಘಟನೆಗೆ ಸಂಬಂಧಿಸಿದಂತೆ ತಮ್ಮ ಪ್ರತಿಕೂಲ ಸಾಕ್ಷ್ಯದಲ್ಲಿ ನುಡಿದಂತಹ ಅಂಶಗಳನ್ನು ಈ ಪ್ರಕರಣದಲ್ಲಿ ಪರಿಗಣಿಸಲು ಸಾಧ್ಯವಿರುವುದಿಲ್ಲ. ಈ ಪ್ರಕರಣದಲ್ಲಿ ಘಟನೆಗೆ ಸಂಬಂಧಿಸಿದಂತೆ ಪ್ರಾಸಾ-1 ರವರ ಸಂಬಂಧಿಕರುಗಳನ್ನು ಹೊರತು ಪಡಿಸಿ ಬೇರೆ ಸ್ವತಂತ್ರ ಸಾಕ್ಷಿದಾರರ ಅಥವಾ ಗ್ರಾಮಸ್ಥರ ಸಾಕ್ಷ್ಯವು ಲಭ್ಯವಿರುವುದಿಲ್ಲ. ಒಂದು ವೇಳೆ ನಿಪಿ-1 ರಲ್ಲಿ ಹೇಳಿದಂತೆ ಘಟನೆ ನಡೆದಿದ್ದೇ ಆಗಿದ್ದರೆ ಗ್ರಾಮಸ್ಥರು ಆ ಬಗ್ಗೆ ಸಾಕ್ಷ್ಯ ನುಡಿಯಬಹುದಾಗಿತ್ತು ಮತ್ತು ಆ ಬಗ್ಗೆ ತಕ್ಷಣವೇ ದೂರು ಕೊಡಬಹುದಾಗಿತ್ತು. ಆದರೆ ಈ ಪ್ರಕರಣದಲ್ಲಿ ಘಟನೆ ನಡೆದ ಐದು ತಿಂಗಳ ನಂತರ ದೂರು ಕೊಟ್ಟಿರುವುದು ಮತ್ತು ಘಟನೆಗೆ ಸಂಬಂಧಿಸಿದಂತೆ ಗ್ರಾಮಸ್ಥರ ಹೇಳಿಕೆಗಳನ್ನು ಪಡೆದುಕೊಳ್ಳದೇ ಇರುವುದು ಹಾಗೂ ಗ್ರಾಮಸ್ಥರನ್ನು ಸಾಕ್ಷಿದಾರರ ಪಟ್ಟಿಯಲ್ಲಿಯೂ ಸೇರಿಸದೇ ಇರುವುದು ಘಟನೆಗೆ ಸಂಬಂಧಿಸಿದಂತೆ ಸಂಶಯವನ್ನು ಮೂಡಿಸುತ್ತದೆ. ಕೇವಲ ಪ್ರಾಸಾ-1 ರಿಂದ ಪ್ರಾಸಾ-3 ರವರ ಸಾಕ್ಷ್ಯಾಧಾರಗಳ ಮೇಲೆ

ಆರೋಪಿತರ ವಿರುದ್ಧ ಹೊರಿಸಲಾದ ಆಪಾದನೆಗಳು ಸಾಬೀತಾಗುವುದಿಲ್ಲ. ಆರೋಪಿತರ ವಿರುದ್ಧ ಹೊರಿಸಿದಂತಹ ಆಪಾದನೆಗಳು ಲಭ್ಯವಿರುವ ಸಾಕ್ಷ್ಯಾಧಾರಗಳು ಮತ್ತು ದಾಖಲೆಗಳ ಆಧಾರದ ಮೇಲೆ ಸಾಬೀತಾಗದೇ ಇರುವ ಕಾರಣ ಅಭಿಯೋಗ ಪಕ್ಷವು ಆರೋಪಿತರ ವಿರುದ್ಧ ಗುನ್ಹೆ ಸಾಬೀತುಪಡಿಸುವಲ್ಲಿ ವಿಫಲವಾಗಿರುವುದಾಗಿ ಹೇಳಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಅಂಶ-1 ನ್ನು ನಕರಾತ್ಮಕವಾಗಿ ಉತ್ತರಿಸುತ್ತೇನೆ.

**18. ಅಂಶ.2:-** ಮೇಲೆ ಹೇಳಿದ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶ ಮಾಡಿದ್ದು ಇರುತ್ತದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆಯ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿಕೊಂಡು ಆರೋಪಿತರನ್ನು ಭಾರತೀಯ ದಂಡ ಸಂಹಿತೆಯ ಕಲಂ.323, 324, 504 ಮತ್ತು 506 ಸಹವಾಚಕ ಕಲಂ.34 ರಡಿಯಲ್ಲಿನ ದಂಡನಾರ್ಹ ಅಪರಾಧಗಳಿಂದ ಮುಕ್ತಗೊಳಿಸಿ ನಿರ್ದೋಷಿಗಳು ಎಂದು ಬಿಡುಗಡೆಗೊಳಿಸಲಾಗಿದೆ.

ಪಿಎಫ್‌ನಂ.293/2013, ದಿನಾಂಕ. 24-11-2013 ರಡಿಯಲ್ಲಿ ಅಮಾನತು ಪಡಿಸಿಕೊಂಡಿರುವ ಮೂರು ಮುಕ್ಕಾಲು ಅಡಿ ಉದ್ದದ ಒಂದು ಕಬ್ಬಿಣದ ರಾಡು ಇದು ಬೆಲೆ

ಬಾಳುವ ವಸ್ತುವಾದ್ದರಿಂದ, ಅದನ್ನು ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ಇಟ್ಟಿರುತ್ತೇನೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ **ದಿನಾಂಕ 15ನೇ ಏಪ್ರಿಲ್ 2026 ರಂದು** ಉದ್ಘೋಷಿಸಲಾಯಿತು).

(ಶ್ರೀಮತಿ ರಾಧಾ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

## ಅನುಬಂಧ

### 1. ಅಭಿಯೋಜನೆಯ ಪರ ಸಾಕ್ಷಿ ನುಡಿದವರ ಪಟ್ಟಿ:-

| | | |
|---|---|---|
| ಪ್ರಾಸಾ.1 | - | ಚಲುವೇಗೌಡ |
| ಪ್ರಾಸಾ.2 | - | ಮರಿಗೌಡ ಉ ಚಿಕ್ಕಚಲುವೇಗೌಡ |
| ಪ್ರಾಸಾ.3 | - | ರಾಜಣ್ಣ |
| ಪ್ರಾಸಾ.4 | - | ವೆಂಕಟೇಶ್ |
| ಪ್ರಾಸಾ.5 | - | ಎ.ಪಿ. ಕುಮಾರ್ |

### 2. ಅಭಿಯೋಜನೆಯ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿ:-

| | | |
|---|---|---|
| ನಿಪಿ.1 | - | ದೂರು |
| ನಿಪಿ.1(ಎ) | - | ಪ್ರಾಸಾ-1 ರವರ ಸಹಿ |
| ನಿಪಿ.2 | - | ಸ್ಥಳ ಮತ್ತು ಅಮಾನತ್ತು ಪಂಚನಾಮೆ |
| ನಿಪಿ.2(ಎ) | - | ಪ್ರಾಸಾ-1 ರವರ ಸಹಿ |
| ನಿಪಿ.2(ಬಿ) | - | ಪ್ರಾಸಾ-3 ರವರ ಸಹಿ |
| ನಿಪಿ.2(ಸಿ) | - | ಪ್ರಾಸಾ-4 ರವರ ಸಹಿ |
| ನಿಪಿ.2(ಡಿ) | - | ಪ್ರಾಸಾ-5 ರವರ ಸಹಿ |

ನಿಪಿ.3 - ಗಾಯದ ಪ್ರಮಾಣ ಪತ್ರ
ನಿಪಿ.3(ಎ) - ಪ್ರಾಸಾ-5 ರವರ ಸಹಿ
ನಿಪಿ.4 - ಪ್ರಥಮ ವರ್ತಮಾನ ವರದಿ

**3. ಆರೋಪಿತರ ಪರ ಸಾಕ್ಷಿ ನುಡಿದವರ ಪಟ್ಟಿಃ-**

-ಇಲ್ಲಾ-

**4. ಆರೋಪಿತರ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿಃ-**

ಮುದ್ದೆಮಾಲು-1ಃ ಕಬ್ಬಿಣದ ರಾಡು

(ಶ್ರೀಮತಿ ರಾಧಾ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

RADHA SHEDDI

Digitally signed by RADHA SHEDDI
Date: 2026.05.27 16:46:08 +0530